**OS No. 62/2020**
**ಪಿ.ಡಬ್ಲ್ಯೂ: 1**

**ದಿನಾಂಕ: 14-07-2025 ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು ಪ್ರತಿವಾದಿ ನಂಬರ 3 ಮತ್ತು 4 ರವರ ಪರ: ಶ್ರೀ ಜಿ.ಎಸ್, ಎನ್. ವಕೀಲರಿಂದಃ**

1. ಯಾದಗಿರಿ ಮತ್ತು ಗುರುಮಿಠಕಲ ತಾಲ್ಲೂಕಾದಲ್ಲಿ ನೀರಾವರಿ ಡ್ಯಾಮಗಳು ಇವೆ ಎಂದರೆ ಸರಿಯಲ್ಲ. ಸದರಿ ಯಾದಗಿರಿ ಮತ್ತು ಗುರುಮಿಠಕಲ ರೈತರು ಮಳೆ ನೀರಿನ ಮೇಲೆ ಆಧಾರವಾಗಿ ಬೆಳೆಯನ್ನು ಬೆಳೆಯುತ್ತಾರೆ ಎಂರೆ ಸಾಕ್ಷಿಯು ಪಂಪಸೆಟ್ ಮೇಲೆ ಆಧಾರವಾಗಿರುತ್ತಾರೆ ಎಂದು ನುಡಿಯುತ್ತಾರೆ. ಯಾದಗಿರಿ ಮತ್ತು ಗುರುಮಿಠಕಲ ತಾಲೂಕಾದಲ್ಲಿ 100 ಕೆರೆಗಳು ಇವೆ ಎಂದರೆ ಗೊತ್ತಿಲ್ಲ. ಸದರಿ ಕೆರೆಗಳು ತುಂಬಿದ ಮಾತ್ರಕ್ಕೆ ರೈತರಿಗೆ ಅನುಕೂಲವಾಗುತ್ತದೆ ಎಂದರೆ ಸರಿಯಲ್ಲ. ಸನಃ 2017-2018 ರಲ್ಲಿ ಕರ್ನಾಟಕ ಸರಕಾರವು ಗುರುಮಿಠಕಲ ತಾಲೂಕಾದ ಕರೆಗಳನ್ನು ತುಂಬುವ ಯೋಜನೆಯನ್ನು ಮಂಜೂರು ಮಾಡಿರುತ್ತದೆ ಎಂದರೆ ಸರಿಯಲ್ಲ. ಸದರಿ ಯದಾಗಿರಿ ಭೀಮಾನದಿಯಿಂದ ಗುರುಮಿಠಕಲ ತಾಲೂಕಿನ 35 ಕೆರೆಗಳು ತುಂಬಲು ಯೋಜನೆಯನ್ನು ಮಂಜೂರು ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಕೆರೆಗಳು ತುಂಬುವ ಯೋಜನೆಯಲ್ಲಿ ಶೇಕಡಾ 98 ರಷ್ಟು ಕೆಲಸ ಮುಗಿದಿರುತ್ತದೆ ಎಂದರೆ ಸರಿಯಲ್ಲ. ಸದರಿ ಯಾದಗಿರಿ ಮತ್ತು ಗುರುಮಿಠಕಲ ತಾಲುಕಾದಲ್ಲಿ 34 ಕೆರೆಗಳು ಯೋಜನೆಯಲ್ಲಿ ತುಂಬಿರುತ್ತದೆ ಎಂದರೆ ಸರಿಯಲ್ಲ. ಸದರಿ ಯೋಜನೆಯಡಿಯಲ್ಲಿ 94 ಕಿ.ಮೀ ಪೈಪಲೈನ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಪೈಪುಗಳು ರೈತರ ಜಮಿನಿನಲ್ಲಿ 3 ರಿಂದ 3 ವರೆ ಫೀಟ ಕೇಳಗಡೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಪೈಪಲೈನನಿಂದ ಯಾವುದೇ ತೊಂದರೆ ಆಗುವುದಿಲ್ಲ ಎಂದರೆ ಸರಿಯಲ್ಲ. ಸದರಿ ಪೈಪಲೈನನಿಂದ ನನ್ನ ವ್ಯವಸಾಯಕ್ಕೆ ಯಾವುದೇ ರೀತಿಯ ತೊಂದರೆ ಆಗುವುದಿಲ್ಲ ಎಂದರೆ ಸರಿಯಲ್ಲ. ಸದರಿ ಪೈಪಲೈನ ಒಬ್ಬ ರೈತನ ಜಮಿನಿನಿಂದ ಬೇರೆ-ಬೇರೆ ರೈತರ ಜಮೀನಿನಲ್ಲಿ ಹಾದು-ಹೋಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಪೈಪಲೈನನಿಂದ ವ್ಯವಸಾಯಕ್ಕೆ ತೊಂದರೆಯಾಗುತ್ತದೆ ಎಂದು ತಹಶೀಲ್ದಾರಗೆ ಅರ್ಜಿ ನೀಡಿರುವುದಿಲ್ಲ. ನಾನು ತಹಶೀಲ್ದಾರ ಇವರಿಗೆ ಯಾವುದೇ ಅರ್ಜಿ ನೀಡಿರುವುದಿಲ್ಲ.

2. ಸದರಿ ಪ್ರತಿವಾದಿ ನಂಬರ 3 ಮತ್ತು 4 ರವರ ಕಡೆಯಿಂದ ಹೆಚ್ಚು ಹಣ ವಸೂಲು ಮಾಡುವ ಉದ್ದೇಶದಿಂದ ನಾನು ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಯೋಜನೆಯಿಂದ ನಮ್ಮ ಊರಿನ ರೈತರಿಗೆ ಮತ್ತು ಜಾನುವಾರುಗಳಿಗೆ ಸೌಲಭ್ಯವಾಗುತ್ತದೆ ಎಂದರೆ ಸರಿಯಲ್ಲ. ಸದರಿ ಯೋಜನೆಯ ಬಗ್ಗೆ ನನಗೆ ಮಾಹಿತಿ ಇದ್ದರೂ ಕೂಡ ಈ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂಡಾಧಿಕಾರಿಗಳು ಯಾದಗಿರಿ**